# ಡಿವಿಜಿ ಅವರ ಮಂಕುತಿಮ್ಮನ ಕಗ್ಗ–ಒಂದು ಅವಲೋಕನ.

**ಡಾ. ರುಕ್ಮಿಣಿ ಹೆಚ್. ಎಸ್.**
ಸಹಾಯಕ ಪಾಧ್ಯಾಪಕರು
ಕನ್ನಡ ವಿಭಾಗ
ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು
ಚಾಮರಾಜನಗರ.

Article Link: https://aksharasurya.com/2023/09/rukmini-h-s/

## ABSTRACT:

ಕನ್ನಡದ ಭಗವದ್ಗೀತೆ ಎಂದೇ ಪ್ರಸಿದ್ಧವಾಗಿರುವ ಡಿ.ವಿ.ಗುಂಡಪ್ಪನವರು ಸೃಜಿಸಿದ "ಮಂಕುತಿಮ್ಮನ ಕಗ್ಗ"ವು ಬದುಕಿನ ಸಾರವನ್ನು ವಿಶ್ಲೇಶಿಸುವ ಅತ್ಯದ್ಭುತವಾದ ಕೃತಿಯಾಗಿದೆ. ಭಗವದ್ಗೀತೆ ಉಪನಿಷತ್‌ಗಳ ಸಾರವೆನ್ನುತ್ತಾರೆ. ಗುಂಡಪ್ಪನವರ ಕಗ್ಗವನ್ನು ಸಮರ್ಪಕವಾಗಿ ಅರ್ಥೈಸಿಕೊಂಡಿದ್ದೇ ಆದಲ್ಲಿ ಇಡೀ ಉಪನಿಷತ್‌ಗಳ ಸಾರವನ್ನೇ ಅರ್ಥೈಸಿಕೊಂಡಂತೆ ಎನ್ನುವ ವಿದ್ವಾಂಸರ ಮಾತೊಂದಿದೆ. ಇದರಲ್ಲಿ ಜನಪದರ ನುಡಿಗಟ್ಟು, ವಚನಕಾರರ ಮಾತಿನ ಬೆಳಕು,,, ಈ ಮೊದಲಾದವುಗಳ ಸಾರ ಮಡುಗಟ್ಟಿದೆ. ಇದರಲ್ಲಿ ಏನಿಲ್ಲ ಎಂದು ಹೇಳುವಂತಿಲ್ಲ. ಡಿ.ವಿ.ಜಿ ರವರು ತಮ್ಮ ಜೀವನಾನುಭವದ ಸಾರವನ್ನು ಉದಾಹರಣೆ ಸಹಿತ ವಿಶ್ಲೇಷಿಸುತ್ತಾರೆ. ಒಟ್ಟಾರೆಯಾಗಿ ಗುಂಡಪ್ಪನವರ ಜ್ಞಾನದ ಸಾರವೇ ಈ "ಮಂಕುತಿಮ್ಮನ ಕಗ್ಗ" ವಾಗಿದೆ.

'ಮಂಕುತಿಮ್ಮ' ಎಂಬ ಅಂಕಿತನಾಮವನ್ನೊಂದಿದ ನಾಲ್ಕು ಸಾಲುಗಳ ವಿಶಿಷ್ಟ ಶೈಲಿಯಲ್ಲಿನ ಪದ್ಯ ರಚನೆ ಜೀವನದ ತಿರುಳನ್ನು ನೈತಿಕ ಮೌಲ್ಯಗಳನ್ನು ಪ್ರತಿಪಾದಿಸುವಂತಹ ಮಹತ್ವಪೂರ್ಣ ಕೃತಿಯಾಗಿದೆ. ಗುಂಡಪ್ಪನವರು ಬಹುಷಃ ತಾವು ಹಳೆಯ ವಸ್ತುವಿಷಯ ವಿಚಾರಗಳನ್ನು ಕುರಿತು ಮಾತನಾಡುತ್ತಿದ್ದುದ–ರಿಂದಲೂ ಏನೋ ಹಳೆಯ ಶೈಲಿಯನ್ನೇ ಅಳವಡಿಸಿಕೊಂಡು ಕಗ್ಗವನ್ನು ರಚಿಸಿದ್ದಾರೆ. ಕಗ್ಗದ ಮತ್ತೊಂದು ವೈಶಿಷ್ಟ್ಯತೆಯೆಂದರೆ ಕೃತಿಯ ಆದಿ, ಮಧ್ಯ ಮತ್ತು ಅಂತ್ಯ ಭಾಗದ ಮಧ್ಯ ಮಧ್ಯ ಎಲ್ಲೇ ಯಾವ ಪದ್ಯವನ್ನೇ ಓದಿದರೂ, ಮುಖ್ಯವಿಚಾರ ಸ್ಪಷ್ಟವಾಗಿ ಗ್ರಹಿಕೆಗೆ ಸಿಗುವಂಥದ್ದು. ಜೀವನದ ಆತ್ಮಾನುಭವದ ಪರಿಪಾಕದಿಂದ ಹೊರಹೊಮ್ಮಿದ ಮಂತ್ರ ಸದೃಶವಾದ ಉಕ್ತಿ ಹಾಗೂ ಎಲ್ಲರ ಬಾಳ್ವೆಗೆ ಸಲ್ಲುವ ಕೃತಿಯಿದು.

ನೊಂದ ಜೀವಗಳಿಗೆ ಸಾಂತ್ವಾನವನ್ನು ನೀಡುತ್ತಾ, ಜೀವನದ ಉಪದೇಶಗಳನ್ನು ಪ್ರೀತಿಯಿಂದ ಉಪದೇಶಿಸುತ್ತಾ, ಬದುಕಿನ ಸುಗಮ ಪಯಣಕ್ಕೆ ಅಗತ್ಯವಾದ ಜೀವನಾನುಭವವನ್ನು ಉಣಬಡಿಸುತ್ತಿರುವ 'ಮಂಕುತಿಮ್ಮನ ಕಗ್ಗ' ಕೇವಲ ಕಾವ್ಯವಷ್ಟೇ ಅಲ್ಲ. ಇದು ಕನ್ನಡದಲ್ಲೇ ಮೈದೆಳೆದು ಬಂದಿರುವ ಉಪನಿಷದ್ವಾಣಿ.

ಇಡೀ ಕೃತಿ ಬದುಕಿಗೆ ಗುರಿ ಹೇಗೆ ಇರಬೇಕು, ಮಾನವ ಚಿಂತಾಮುಕ್ತನಾಗಿ ಹೇಗಿರಬೇಕು, ಜೀವನವನ್ನು ಹೇಗೆ ನಡೆಸಬೇಕು ಬದುಕಿನಲ್ಲೆದುರಾಗುವ ಸಂಕಷ್ಟಗಳನ್ನು ಹೇಗೆ ಎದುರಿಸಬೇಕು......... ಈ ಮುಂತಾದ ವಸ್ತುವಿಷಯಗಳನ್ನು ಸಾದೃಷ್ಯವಾಗಿ ವಿಶ್ಲೇಸಿಸುತ್ತದೆ. ಇಂತಹ ಅತ್ಯದ್ಭುತವಾದ ಕೃತಿಯಲ್ಲಿನ ಪ್ರಿಯವೆನಿಸಿದ ಕೆಲವು ಪದ್ಯಗಳ ಆಧಾರದ ಮೇಲೆ ಕಗ್ಗದ ವಿಶ್ಲೇಷಣೆ ಮಾಡುವ ಪುಟ್ಟ ಪ್ರಯತ್ನ ನನ್ನದಾಗಿರುತ್ತದೆ.

## KEYWORDS:

ಕಗ್ಗ, ಉಪನಿಷತ್, ಜೀವನ, ನೈತಿಕ ಮೌಲ್ಯ, ವೈಶಿಷ್ಟ್ಯತೆ.

ಸರಳ ಮತ್ತು ಉನ್ನತ ಚಿಂತನೆಗಳ ಸಾಕಾರಮೂರ್ತಿಯಾಗಿದ್ದ ಡಿ.ವಿ.ಗುಂಡಪ್ಪನವರು ಕನ್ನಡ ಸಾರಸತ್ವ ಲೋಕದಲ್ಲಿ ಬೆಳಗಿದ ಧೃವತಾರೆಗಳಲ್ಲಿ ಒಬ್ಬರು. 1943 ರಲ್ಲಿ ಪ್ರಕಟಗೊಂಡ ಇವರ "ಮಂಕುತಿಮ್ಮನ ಕಗ್ಗ" 21 ನೇ ಶತಮಾನದ ಭಗವದ್ಗೀತೆ ಎಂದೇ ಪ್ರಸಿದ್ಧಿ ಪಡೆದುಕೊಂಡಿರುವಂತದ್ದು. ಕೃತಿಯ ಶೀರ್ಷಿಕೆಯ ವೈಷ್ಟ್ಯತೆ ಬಗ್ಗೆ ಹೇಳುವುದಾದರೆ 'ಮಂಕುತಿಮ್ಮ' ಎಂದರೇ ಸಮಾಜದ ಜನತೆ ಅಂದರೆ ನಾವು ನೀವುಗಳೇ. 'ಕಗ್ಗ' ಎಂದರೆ ಹಗ್ಗ ಎಂದು ಹೇಳಬಹುದು. ಹೇಗೆ ದಾರದ ಎಳೆಗಳು ಬೇರೆಯಾಗಿದ್ದದು ಒಂದೆಡೆ ಸೇರಿ ಗಟ್ಟಿಯಾದ ಹಗ್ಗವಾಗುತ್ತದೆಯೋ ಹಾಗೆಯೇ ಡಿವಿಜಿ ರವರು ಅನುಭವದ ರಸಪಾಕವನ್ನು ಎಳೆಎಳೆಯಾಗಿ ಹೆಣೆದು ಕಗ್ಗವನ್ನು ಗಟ್ಟಿಗೊಳಿಸಿದ್ದಾರೆ. ಬದುಕಿನ ರೀತಿ–ನೀತಿಗಳು, ಬದುಕಿನ ವಿಶಿಷ್ಟ ಆಯಾಮಗಳನ್ನು ವಿಸ್ತಾರವಾಗಿ ಉದಾಹರಣೆ ಸಹಿತ ವಿಶ್ಲೇಷಿಸಿದ್ದಾರೆ. 'ಮಂಕುತಿಮ್ಮ' ಎಂಬ ಅಂಕಿತನಾಮವನ್ನೊಂದಿದ ನಾಲ್ಕು ಸಾಲುಗಳ ವಿಶಿಷ್ಟ ಶೈಲಿಯಲ್ಲಿನ ಪದ್ಯ ರಚನೆ ಜೀವನದ ತಿರುಳನ್ನು ನೈತಿಕ ಮೌಲ್ಯಗಳನ್ನು ಪ್ರತಿಪಾದಿಸುವಂತಹ ಮಹತ್ವಪೂರ್ಣ ಕೃತಿಯಾಗಿದೆ. ಗುಂಡಪ್ಪನವರು ಬಹುಷಃ ತಾವು ಹಳೆಯ ವಸ್ತುವಿಷಯ ವಿಚಾರಗಳನ್ನು ಕುರಿತು ಮಾತನಾಡುತ್ತಿದ್ದುದರಿಂದಲೂ ಏನೋ ಹಳೆಯ ಶೈಲಿಯನ್ನೇ ಅಳವಡಿಸಿಕೊಂಡು ಕಗ್ಗವನ್ನು ರಚಿಸಿದ್ದಾರೆ. ಈ ಭಾಷಾಶೈಲಿಯನ್ನು ಆಧುನಿಕ ಯುಗದ ಬಹುತೇಕ ಕವಿಗಳು ಒಪ್ಪಿ ಸ್ವೀಕರಿಸಿದ್ದಾರೆ.

ಕಗ್ಗದ ಮತ್ತೊಂದು ವೈಶಿಷ್ಟ್ಯತೆಯೆಂದರೆ ಕೃತಿಯ ಆದಿ, ಮಧ್ಯ ಮತ್ತು ಅಂತ್ಯ ಭಾಗದ ಮಧ್ಯ ಮಧ್ಯ ಎಲ್ಲೇ ಯಾವ ಪದ್ಯವನ್ನು ಓದಿದರೂ ಮುಖ್ಯವಿಚಾರ ಸ್ಪಷ್ಟವಾಗಿ ಗ್ರಹಿಕೆಗೆ ಸಿಗುವಂಥದ್ದು. ಜೀವನದ ಆತ್ಮಾನುಭವದ ಪರಿಪಾಕದಿಂದ ಹೊರಹೊಮ್ಮಿದ ಮಂತ್ರ ಸದೃಶವಾದ ಉಕ್ತಿ ಹಾಗೂ ಎಲ್ಲರ ಬಾಳ್ವೆಗೆ ಸಲ್ಲುವ

ಕೃತಿಯಿದು. ಪ್ರತಿ ಬಾರಿ ಓದಿದಾಗಲೂ ಹೊಸ ಹೊಸ ಹೊಳಹುಗಳನ್ನು ಹೊರಹೊಮ್ಮಿಸುವ ಈ ಕೃತಿಯಲ್ಲಿನ ಪ್ರತಿಯೊಂದು ಪದ್ಯವೂ ನೇರಾರ್ಥ ಒಳಾರ್ಥವನ್ನು ಹೊಂದಿರುವಂತಹವುಗಳಾಗಿವೆ.ಉದಾ:

**ಆರ ಕೈತುತ್ತಿಗಂ ನಿನ್ನ ಕಾಯಿಸದೆ ವಿಧಿ**
**ಯಾರ ಭುಜಕಂ ನಿನ್ನ ಭಾರವಗಿಸದೆ**
**ಆರ ಸೆಲೆ ಸುಳಿವುಮಂಟದವೋಲಾಗಿಸಿ ನಿನ್ನ**
**ಪಾರಗಾಣಿಸ ಬೇಡು – ಮಂಕುತಿಮ್ಮ**

ಯಾರಿಗೂ ಹೊರೆಯಾಗದಂತೆ ಯಾರಿಗೂ ಭಾರವಾಗದಂತೆ ಬಂಧು– ಬಳಗದ ಮೋಹಪಾಸದ ಸುಳಿಗೆ ಸಿಲುಕದಂತೆ– ಇವುಗಳೆಲ್ಲದುದರಿಂದ ಪಾರುಮಾಡು ಎಂಬುದು ನೇರ ಅರ್ಥವೆನಿಸುತ್ತದೆ. ಒಳಹೊಕ್ಕು ವಿಶ್ಲೇಸಿದಾಗ ಬದುಕಿನಿಳಿವಯಸ್ಸಿಗೆ ಅಗತ್ಯವಾದುದೆಲ್ಲವನ್ನು ಸಂಗ್ರಹಿಸಿಟ್ಟುಕೊಳ್ಳುವ, ಆರೋಗ್ಯವಂತರಾಗಿ, ಎಲ್ಲಾ ಜವಾಬ್ದಾರಿಗಳನ್ನು ನಿಭಾಹಿಸುವ ಶಕ್ತಿ ಸಾಮರ್ಥ್ಯವನ್ನು ನೀಡು ಎಂದು ಭಗವಂತನಲ್ಲಿ ಸ್ಮರಿಸುವಂತಿದೆ. ಇಷ್ಟೇ ಅಲ್ಲ ಪದೇ ಪದೇ ಈ ಪದ್ಯವನ್ನು ಓದಿದಾಗ ಬೇರೆ ಬೇರೆ ಅರ್ಥಗಳು ಹೊಳೆಯಬಹುದು. ಇದು ಡಿವಿಜಿ ರವರ ಕೃತಿಯ ವೈಶಿಷ್ಟ್ಯ. ಮುಂದುವರಿದಂತೆ,

**ಬಿನದದ ಕಥೆಯಲ್ಲ ಹೃದ್ರಸದ ನಿಝುರಿಯಲ್ಲ**
**ಮನ ನಾನು ಸಂಧಾನ ಕಾದುದೀ ಕಗ್ಗ**
**ನೆನಯುತೊಂದೊಂದು ಪದ್ಯವನದೊಮ್ಮೊಮ್ಮೆ**
**ಅನುಭವಿಸಿ ಚಪ್ಪರಿಸೊ– ಮರುಳ ಮುನಿಯ**

ಎಂದ ಡಿವಿಜಿ ಯವರ ಸೂಚನೆಯನ್ನು ಕನ್ನಡ ಜನತೆ ತಮ್ಮದಾಗಿಸಿಕೊಂಡಿದ್ದಾರೆ. ಹಾಗಾಗಿ ಇಲ್ಲಿಯ ಪದ್ಯಗಳು ಅವರ ಬಾಳ ಬೆಳಕಾಗಿವೆ. 'ಇದು ಪಂಡಿತರನ್ನು ಪ್ರಸಿದ್ಧರನ್ನು ಪುಷ್ಟರನ್ನು ಉದ್ದೇಶಿಸಿದ್ದಲ್ಲ. ಬಹು ಸಾಮಾನ್ಯರಾದವರ ಮನೆಯ ಬೆಳಕಾಗಿ ಇದು ಒಂದು ತೊಟ್ಟಿನಷ್ಟು ಎಣ್ಣೆಯಂತಾದರೆ ನನಗೆ ತೃಪ್ತಿ' ಎಂಬ ಮುನ್ನುಡಿಯ ಮಾತುಗಳು ಡಿವಿಜಿಯವರ ಆಶಯವೂ ಇದೇ ಆಗಿತ್ತು ಎಂಬುದನ್ನು ಸಾರಿ ಹೇಳುತ್ತದೆ.

**ಅಕ್ಕಿಯೊಳಗನ್ನವನು ಮೊದಲಾರು ಕಂಡವನು**
**ಅಕ್ಕರದ ಬರಹಕ್ಕೆ ಮೊದಲಿಗನದಾರು?**
**ಲೆಕ್ಕವಿರಿಸಿಲ್ಲ ಜಗ ತನ್ನಾದಿಬಂಧುಗಳ**
**ದಕ್ಕುವುದೇ ನಿನಗೆ ಜಸ – ಮಂಕುತಿಮ್ಮ**

ತಾನೇ ಸರ್ವಜ್ಞ ನೆಂಬ ಅಹಂನ ಭಾವ ಹೊಂದಿರುವವರಿಗೆ ಗೋಚರಿಸದ

ಅನೇಕಾನೇಕ ಅಚ್ಚರಿಯ ಸಂಗತಿಗಳು, ವಿಚಾರಗಳು, ಬದುಕಿನ ಒಳನೋಟಗಳ ಆತ್ಮಾವಲೋಕನವಾಗಿದೆ. ಒಟ್ಟಾರೆ ಒಂದು ಮಾನುಷ ಪರಿಮಿತಿಯ ಗ್ರಹಿಕೆ ಮತ್ತು ಅರಿವನ್ನು ಪರಸ್ಪರ ಹಂಚಿಕೊಳ್ಳುವ ಪ್ರತಿಮೆ ಮಂಕುತಿಮ್ಮ.

**ಸತ್ತೆನೆಂದೆನಬೇಡ ಸೋತೆನೆಂದೆನಬೇಡ**
**ಬತ್ತಿತೆನ್ನೊಳು ಸತ್ವದೂಟೆ ಎನಬೇಡ**
**ಮೃತ್ಯುವೆಂಬುದು ಒಂದು ತೆರೆಯಿಳಿತ ತೆರೆಯೇರು**
**ಮತ್ತೆ ತೋರ್ಪುದು ನಾಳೆ – ಮಂಕುತಿಮ್ಮ**

ಹೀಗೆ ಸಾವನ್ನು ಎದುರಿಸಿ ನಿಲ್ಲುವ ಆತ್ಮಸ್ಥೈರ್ಯವನ್ನು ತುಂಬಿಕೊಡುತ್ತದೆ. 'ಎದೆಯನುಕ್ಕಾಗಿಸುತ ಮತಿಗಡದೆಯ ಪಿಡಿದು ನೀನೆದುರು ನಿಲೆ ಬಿದಿಯೊಲಿವ' – ಮನಸನ್ನು ಗಟ್ಟಿ ಮಾಡಿಕೊಂಡು ಕುಶಲತೆಯಿಂದ ನಿನಗೆ ಎದುರಾಗಿರುವ ವಿಧಿಯನ್ನು ಗೆಲ್ಲು ಎಂದು ಆತ್ಮಶಕ್ತಿಯ ಧೈರ್ಯ ಹೇಳುವ ಕಗ್ಗ 'ಬದುಕು ಜಟಕಾಬಂಡಿ ವಿಧಿಯದರ ಸಾಹೇಬ ಮದುವೆಗೋ ಮಸಣಕೊ ಹೋಗೆಂದ ಕಡೆಗೋಡು' ಎಂದು ಹಣೆಬರಹವನ್ನು ತಿದ್ದಲಾಗದು ಎನ್ನುತ್ತದೆ. ಹಾಗೆಯೆ ಗುಂಡಪ್ಪನವರು ಜಾತ್ಯಾತೀತ ಸಮಾಜದಲ್ಲಿ,

**ನೂರಾರು ಮತವಿಹುದು ಲೋಕದುಗ್ರಾಣದಲಿ**
**ಆರಿಸಿಕೊ ನಿನ್ನ ರುಚಿಗೊಪ್ಪುವುದನದರೊಳ್**
**ಸಾರದಡುಗೆಯನೊಳವಿಚಾರದೊಲೆಯಲಿ ಮಾಡು**
**ಬೇರೆ ಮತಿ ಬೇರೆ ಮತ –ಮಂಕುತಿಮ್ಮ**

ಹೇ ಮಾನವ ಪ್ರಪಂಚದಲ್ಲಿ ನೂರಾರ ಮತಗಳಿವೆ ನಿನಗೆ ಯಾವ ಮತ ಬೇಕೋ ಅದನ್ನೇ ಆರಿಸಿಕೊ. ಆರಿಸಿಕೊಂಡ ಮತವನ್ನು ಮನವೆಂಬ ಒಲೆಯಲ್ಲಿ ಬೇಯಿಸಿ ಅದರ ಸ್ವಾದವನ್ನು ಸವಿ ಎನ್ನುತ್ತಾರೆ. ಇದು ಜಾತಿ ಮತ ಧರ್ಮವೆಂದು ಕಿತ್ತಾಡಿಕೊಂಡು ಸಾಯುವ ಜನರಿಗೆ ಬಹು ಉಪಯುಕ್ತವಾದ ಮಾತೆನಿಸುತ್ತದೆ. ಯಾವ ಪದ್ಧತಿಯನ್ನ ಅನುಸರಿಸಿದರೂ, ಯಾವ ದೇವರನ್ನಾದರೂ ಆರಾಧಿಸಿದರೂ, ಆಕಾಶದಿಂದ ಬಿದ್ದ ಮಳೆಹನಿ ಬೇರೆ–ಬೇರೆ ಪ್ರದೇಶಗಳಲ್ಲಿ, ಬೇರೆ–ಬೇರೆ ನಾಮಗಳಿಂದ ಹೆಸರುವಾಸಿಯಾದರೂ ಕೊನೆಗೆ ಸೇರುವುದು ಸಾಗರವನ್ನೇ. ಹಾಗೇ ಯಾವ ಮತದವರೇ ಆದರು ಯಾವ ದೈವವನ್ನೇ ಆರಾಧಿಸಿದರೂ ಕಡೆಗೆ ಭಗವಂತನಲ್ಲೆ ಎಲ್ಲವೂ ಲೀನವಾಗುವುದು. 'ದೇವನೊಬ್ಬ ನಾಮ ಹಲವು' ಎನ್ನುವಂತೆ.

ಗುಂಡಪ್ಪನವರು ಜೀವನದಲ್ಲಿ ಸಹಬಾಳ್ವೆಯ ಸಾರವನ್ನು ಸಾರುತ್ತಾ, ಜೀವನದಲ್ಲಿ ಹೇಗಿರಬೇಕೆಂಬುದನ್ನು ಹೀಗೆ ಹೇಳುತ್ತಾರೆ.

**ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು**
**ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೇ**
**ಬೆಲ್ಲ ಸೆಕ್ಕರೆಯಾಗು ದೀನ ದುರ್ಬಲರಿಂಗೆ**
**ಎಲ್ಲರೊಳಗೊಂದಾಗು – ಮಂಕುತಿಮ್ಮ**

**ಎನ್ನುತ್ತಾರೆ. ಮುಂದುವರೆದು ಜೀವನದ ಬಗ್ಗೆ ಬರೆಯುತ್ತಾ,**

**ಶರಣುವೊಗು ಜೀವನರಹಸ್ಯದಲಿ ಸತ್ವದಲಿ**
**ಶರಣು ಜೀವನವ ಸುಮವೆನಿಪ ಯತ್ನದಲಿ**
**ಶರಣಂತರಾತ್ಮಗಂಭೀರ ಪ್ರಶಾಂತಿಯಲಿ**
**ಶರಣು ವಿಶ್ವಾತ್ಮದಲಿ – ಮಂಕುತಿಮ್ಮ**

ಗುಂಡಪ್ಪನವರು ಮಾನವನಿಗೆ ಶರಣಾಗು ರಹಸ್ಯಮಯವಾದ ಜೀವನ ಸತ್ವಕ್ಕೆ, ಹೂವಿನಂತೆ ಬಾಳ್ವ ಬಾಳ್ವೆಗೆ, ಅಂತರಂಗದ ಪ್ರಶಾಂತತೆಯಲ್ಲಿ ಗಂಭೀರವಾಗಿ ಪರತತ್ವಕ್ಕೆ ಮತ್ತು ವಿಶ್ವಾತ್ಮಭಾವಕ್ಕೆ ಎಂದು ಸೂಚಿಸುತ್ತಾರೆ. ಜೀವನವನ್ನು ಹೂವಿಗೆ ಹೋಲಿಸುತ್ತಾ ಸುಂದರವಾದ ಹೂ ಹೇಗೆ ಜಗತ್ತಿಗೆ ಸುಗಂಧ ಹಾಗೂ ಸುರುಚಿಗಳನ್ನು ನೀಡಿ ತನ್ನ ಬದುಕನ್ನು ಸಾರ್ಥಕಗೊಳಿಸಿಕೊಳ್ಳುತ್ತದೆಯೋ ಹಾಗೆ ಮಾನವನ ಬದುಕಿರಬೇಕು ಎನ್ನುತ್ತಾರೆ. ಅದಕ್ಕಾಗಿಯೇ 'ಸುಮವೆನಿಪ ಯತ್ನದಲಿ' ಎನ್ನುತ್ತಾರೆ. ಒಂದು ಸುಮದ ಜೀವಿತಾವಧಿ ಒಂದೇ ದಿನವಾದರೂ ಹೇಗೆ ತನ್ನ ನಗುಮೊಗದಿಂದ ಎಲ್ಲರ ಮನವನ್ನು ಮುದಗೊಳಿಸುತ್ತದೆಯೋ ಹಾಗಯೇ ಮಾನವನು ತನ್ನ ಜೀವನದ ಅನುಭವದ ಸಾರವನ್ನು ಗ್ರಹಿಸಿಕೊಂಡು ಅದರಲ್ಲಿನೊಳ್ಳೆಯ ವಿಚಾರಗಳನ್ನು ಕೆಟ್ಟ ವಿಚಾರಗಳನ್ನು ಸರಿದೂಗಿಸಿಕೊಳ್ಳುತ್ತಾ ಬದುಕನ್ನು ಹಸನಾಗಿಸಿಕೊಳ್ಳುತ್ತಾ ಸಾಗಬೇಕು ಎನ್ನುತ್ತಾರೆ.

ಮತ್ತೊಂದು ಪದ್ಯದಲ್ಲಿ "ಬಾಳ ಹಳಿವುದದೇಕೆ? ಗೋಳ ಕರೆವುದದೇಕೆ?" ಎನ್ನುತ್ತಾರೆ. ಬ್ರಹ್ಮನ ವಿಧಿ ಲಿಖಿತದನ್ವಯ ಜೀವನ ನಡೆದೇ ತೀರುತ್ತದೆ. "ಕುದುರೆ ನೀನ್, ಅವನು ಪೇಳ್ದಂತೆ ಪಯಣಿಗನು" ಎನ್ನುವುದೂ ಈ ಅರ್ಥದಲ್ಲೇ. ಇಲ್ಲಿ ನಮ್ಮ ಪಾತ್ರವೇನೂ ಇಲ್ಲ ಹೀಗಾಗಿ ಜೀವನದಲ್ಲಿ ಅಂಜದೆ ಅಳುಕದೆ ಪರಿತಪಿಸದೆ ಗೋಳಾಡಿಕೊಂಡು ಬದುಕದೆ ಜೀವನವನ್ನು ಎದುರಿಸು ಎನ್ನುತ್ತಾರೆ.

ಗುಂಡಪ್ಪನವರು ತಮ್ಮ ಕೃತಿಯಅತ್ಯಂತ ಉತ್ಕೃಷ್ಟವಾದುದು ಎಂದೇನು ಹೇಳುವುದಿಲ್ಲ. ಬದಲಿಗೆ,

**ಸಂದೇಹವೀ ಕೃತಿಯೊಳಿನ್ನಿಲ್ಲವೆಂದಲ್ಲ**
**ಇಂದು ನಂಬಿಹುದೆ ಮುಂದೆಂದುಮೆಂದಲ್ಲ**
**ಕುಂದು ತೋರ್ದಂದದನು ತಿದ್ದಿಕೊಳೆ ಮನಸುಂಟು**

**ಇಂದಿಗೀ ಮತ ಉಚಿತ – ಮಂಕುತಿಮ್ಮ**

ಎನ್ನುತ್ತಾರೆ. ತಾವು ಬರೆದಿರುವ ಈ ಕೃತಿ ಸರ್ವಶ್ರೇಷ್ಠವಲ್ಲ. ಇದರಲ್ಲಿ ಸಂದೇಹವೇ ಇಲ್ಲ ಎಂದಲ್ಲ, ಇದ್ದರೂ ಇರಬಹುದು ಯಾರಾದರೂ ಸರಿಯೇ ತನ್ನ ಈ ಕೃತಿಯಲ್ಲಿನ ವಿಚಾರಗಳು ತಪ್ಪೆಂದು, ನಮ್ಮ ಬರವಣಿಗೆಯಲ್ಲಿನ ಕುಂದು–ಕೊರತೆಗಳನ್ನು ತೋರಿದರೆ ಅದನ್ನು ನಿಷ್ಕಲ್ಮಶ ಮನದಿಂದ ಒಪ್ಪಿ ತಿದ್ದಿಕೊಳ್ಳುತ್ತೇನೆಂದು ಹೇಳುವಲ್ಲಿ ಅವರ ವಿಶಾಲ ಮನೋಭಾವ ಕಾಣಸಿಗುತ್ತದೆ. ಸ್ವಪ್ರತಿಷ್ಠೆಯಲ್ಲಿ ಮೆರೆವ ಎಷ್ಟೋ ಜನಕ್ಕೆ ಗುಂಡಪ್ಪನವರು ಆದರ್ಶ ವ್ಯಕ್ತಿಯಾಗುತ್ತಾರೆ. ಇಂತಹ ಮುಕ್ತಭಾವ ಎಲ್ಲರಲ್ಲಿಯೂ ಕಾಣ ಸಿಗುವುದಿಲ್ಲ.

ಡಿವಿಜಿ ರವರು ತಮ್ಮ ಕೃತಿಯ ಅಂತ್ಯದಲ್ಲಿ ಯಾರಿಗಾಗಿ ಈ ಕೃತಿಯನ್ನು ರಚಿಸಿರುವೆ ಎನ್ನುವುದನ್ನು ಈ ರೀತಿ ವಿವರಿಸುತ್ತಾರೆ

**ವ್ಯಾಕರಣ ಕಾವ್ಯಲಕ್ಷಣಗಳನು ಗಣಿಸದೆಯೆ**
**ಲೋಕತಾಪದಿ ಬೆಂದು ತಣಿಪನೆಳಸಿದವಂ**
**ಈ ಕಂತೆಯಲಿ ತನ್ನ ನಂಬಿಕೆಯ ನೆಯ್ದಿಹನು**
**ಸ್ವೀಕರಿಕೆ ಬೇಳ್ಪವರು – ಮಂಕುತಿಮ್ಮ**

ಕಾರಣ ಅವರಿಗೆ ಸ್ಪಷ್ಟವಾಗಿ ತಿಳಿದಿತ್ತು ಈ ಜಗತ್ತಿನಲ್ಲಿರುವರಿಗೆಲ್ಲರಿಗೂ ಉಪದೇಶ ಸ್ವೀಕಾರರ್ಹವಲ್ಲ ಎಂಬುದು. ಹಾಗಾಗಿ ಯಾರಿಗೆ ಯಾವಾಗ ಈ ಉಪದೇಶ ಬೇಕೆನಿಸುತ್ತದೋ ಆಗ ಅವರಿಗೆ ಇವು ಸಿದ್ಧವಾಗಿ ಅವರಿಗೆ ಜೀವನಕ್ಕೆ ಒಂದು ನೆರವು, ನಂಬಿಕೆ ಮತ್ತು ಆಸರೆಗಳಾಗಿರುತ್ತವೆ ಎನ್ನುತ್ತಾರೆ.

ಹೀಗೆ ನೊಂದ ಜೀವಗಳಿಗೆ ಸಾಂತ್ವಾನವನ್ನು ನೀಡುತ್ತಾ, ಜೀವನದ ಉಪದೇಶಗಳನ್ನು ಪ್ರೀತಿಯಿಂದ ಉಪದೇಶಿಸುತ್ತಾ, ಬದುಕಿನ ಸುಗಮ ಪಯಣಕ್ಕೆ ಅಗತ್ಯವಾದ ಜೀವನಾನುಭವವನ್ನು ಉಣಬಡಿಸುತ್ತಿರುವ 'ಮಂಕುತಿಮ್ಮನ ಕಗ್ಗ' ಕೇವಲ ಕಾವ್ಯವಷ್ಟೇ ಅಲ್ಲ. ಇದು ಕನ್ನಡದಲ್ಲೇ ಮೈದೆಳೆದು ಬಂದಿರುವ ಉಪನಿಷದ್ವಾಣಿ. ಇಡೀ ಕೃತಿ ಬದುಕಿಗೆ ಗುರಿ ಹೇಗೆ ಇರಬೇಕು, ಮಾನವ ಚಿಂತಾಮುಕ್ತನಾಗಿ ಹೇಗಿರಬೇಕು, ಜೀವನವನ್ನು ಹೇಗೆ ನಡೆಸಬೇಕು ಬದುಕಿನಲ್ಲೆದುರಾಗುವ ಸಂಕಷ್ಟಗಳನ್ನು ಹೇಗೆ ಎದುರಿಸಬೇಕು......... ಈ ಮುಂತಾದ ವಸ್ತುವಿಷಯಗಳನ್ನು ಸಾದೃಷ್ಯವಾಗಿ ವಿಶ್ಲೇಸಿಸುತ್ತದೆ.

**ಪರಾಮರ್ಶನ ಗ್ರಂಥಗಳು:**

1. ಮಂಕುತಿಮ್ಮನ ಕಗ್ಗ–ತಾತ್ಪರ್ಯ (2018, 19 ಮುದ್ರಣ), ಶ್ರೀ ಹೆಚ್. ವಿ. ಶ್ರೀಕಾಂತ್, ಶ್ರೀರಂಗ ಪ್ರಿಂಟರ್ಸ್, ಬೆಂಗಳೂರು.
2. ಕಗ್ಗ ರಸಧಾರೆ: ಸಂಪುಟ–1 (2013), ರವಿ ತಿರುಮಲೈ, ವಿಜಯ ರವಿ ಪ್ರಕಾಶನ, ಬೆಂಗಳೂರು.
3. ಕಗ್ಗ ರಸಧಾರೆ: ಸಂಪುಟ–2 (2014), ರವಿ ತಿರುಮಲೈ, ವಿಜಯ ರವಿ ಪ್ರಕಾಶನ, ಬೆಂಗಳೂರು.